ಎಂ ವಿ ಸಿ ನಂ:339/2025
ಪಿ ಡಬ್ಲ್ಯು: 01

ದಿನಾಂಕ:**17-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲು: **1** ನೇ ಎದುರುದಾರರ ಪರ **Sri. S.R.S.** ವಕೀಲರಿಂದ:

1. ನಾನು ಎನ್ ಆರ್ ಪುರದ ಸುತ್ತದ ಬಳಿ ವಾಸ ಇರುತ್ತೇನೆ. ನಾನು ಮನೆ ಕೆಲಸ ಮಾಡಿಕೊಂಡು ವಾಸ ಇರುತ್ತೇನೆ. ಸಾಕ್ಷಿ ಮುಂದುವರೆದು ಈಗ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತ ಆಗುವ ಕಾಲಕ್ಕೆ ನನಗೆ 68 ವರ್ಷ ವಯಸ್ಸಾಗಿತ್ತು ಎಂದು ಅರ್ಜಿಯಲ್ಲಿ ಬರೆಸಿರುತ್ತೇನೆ. ನನ್ನ ಹೆಸರಿನಲ್ಲಿ ಯಾವುದೇ ಕೃಷಿ ಭೂಮಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಸರಿನಲ್ಲಿ ಜಮೀನು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ಹೆಸರಿನಲ್ಲಿ ಯಾವ ಯಾವ ಸರ್ವೇ ನಂಬರ್ ನಲ್ಲಿ ಜಮೀನು ಇರುತ್ತದೆ ಎಂದು ಹೇಳಲಾಗುವುದಿಲ್ಲ. ನನ್ನ ಕೃಷಿ ಜಮೀನಿನಲ್ಲಿ ನಾನು ಭತ್ತದ ಬೆಳೆ ಬೆಳೆಯುತ್ತೇನೆ. ನನಗೆ ಸದರಿ ಜಮೀನಿನಿಂದ 50 ಚೀಲ ವಾರ್ಷಿಕವಾಗಿ ಭತ್ತ ಬರುತ್ತದೆ.

2. 2025 ರಲ್ಲಿ ನಮ್ಮ ಜಮೀನಿನಲ್ಲಿ 30 ಚೀಲ ಭತ್ತ ಬಂದಿರುತ್ತದೆ. ಈ ವರ್ಷ ಸದರಿ ಜಮೀನಿನಿಂದ 35 ಚೀಲ ಭತ್ತ ಬಂದಿರುತ್ತದೆ. ಕೃಷಿ ಜಮೀನಿನಿಂದ ವಾರ್ಷಿಕ ವರಮಾನದಲ್ಲಿ ಯಾವುದೇ ನಷ್ಟ ಆಗಿರುವುದಿಲ್ಲ ಎಂದರೆ ಸರಿ. ನಾನು ಆ ದಿನ ಕರ್ಕ್ ಬಳ್ಳಿ ಬಳಿ ನಿಂತಿದ್ದಾಗ ಅಪಘಾತ ಆಗಿರುತ್ತದೆ. ನನಗೆ ಬೆಳಗ್ಗೆ 11.00 ಸಮಯದಲ್ಲಿ ಅಪಘಾತ ಆಗಿರುತ್ತದೆ. ಅಪಘಾತ ಆಯಿತು ಎಂದು ಹೇಳುವ ವಾಹನದ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದರಿ ಅಪಘಾತವನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅಪಘಾತ ಆದ ನಂತರ ಸಾರ್ವಜನಿಕ ಆಸ್ಪತ್ರೆಗೆ ಕೊಪ್ಪಗೆ ಹೋಗಿರುತ್ತೇನೆ. ಸಾಕ್ಷಿ ಮುಂದುವರೆದು ಯಾವ ಆಸ್ಪತ್ರೆ ಎಂದು ಮರೆತುಹೋಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

3. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ಪಡಿತರ ಚೀಟಿ ಇರುತ್ತದೆ. ಸದರಿ ಬಿ.ಪಿ.ಎಲ್ ಪಡಿತರ ಚೀಟಿಯನ್ನು ವಾರ್ಷಿಕ 50 ಸಾವಿರಕ್ಕಿಂತ ಕಡಿಮೆ ವರಮಾನ ಇರುವವರಿಗೆ ಕೊಡುತ್ತಾರೆ ಎಂದರೆ ಸರಿ. ನಾನು ಒಳರೋಗಿಯಾಗಿ ಒಂದು ವಾರಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಒಂದು ವಾರಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವೈದ್ಯಕೀಯ ಬಿಲ್ ಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದರೂ ಸಹ ತೀವ್ರ ಸ್ವರೂಪದ ಗಾಯಗಳು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಚಲಾಯಿಸುತ್ತಿದ್ದ ಕಾರಿಗೆ ವಿಮೆ ಚಾಲ್ತಿಯಲ್ಲಿ ಇತ್ತು

ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು **2** ನೇ ಎದುರುದಾರರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ತಮ್ಮ ಆಕ್ಷೇಪಣೆಯನ್ನು ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿ ಃ